

## ದತ್ತೂರಿ

ದತ್ತೂರಿ, ಉಮ್ಮತ್ತ, ಮದಗುಣಿಕೆ ಎಂಬಿತ್ಯಾದಿ ಹೆಸರುಳ್ಳ ದತ್ತೂರಿಯು ಹೂ ಹಾಗೂ ಕಾಯಿ ಬಿಡುವ, ಅಗಲ ಎಲೆಯ ಹಾದಿಬೀದಿಗಳಲ್ಲೆಲ್ಲ ತಾನೇ ತಾನಾಗಿ ಬೆಳೆಯುವ ಸಸ್ಯವಾಗಿದೆ. ಹೊಲಗಳಲ್ಲಿ ಕಳೆಯಂತೆ ಬೆಳೆಯುವ ದತ್ತೂರಿಯು ಸಾಕಷ್ಟು ಔಷಧೀಯ ಗುಣವುಳ್ಳದ್ದಾಗಿದ್ದು ಆಯುರ್ವೇದದಲ್ಲಿ ಸಾಕಷ್ಟು ಪ್ರಾಮುಖ್ಯತೆಯನ್ನು ಪಡೆದಿದೆ.

ದತ್ತೂರಿ ಸೊಪ್ಪಿನ ಆವಿಯಿಂದ ದೀರ್ಘಕಾಲದ ಕಫ ನಿವಾರಣೆಯಾಗಿ ಉಸಿರಾಟ ಸುಗಮವಾಗುವುದು. ದತ್ತುರಿ ಎಲೆಯ ಚೂರ್ಣವನ್ನು ಲೇಪಿಸಿಕೊಳ್ಳುವುದರಿಂದ ತುರಿಕೆ, ಕಜ್ಜಿ, ಗಜಕರ್ಣ, ಮತ್ತು ಚರ್ಮದ ಕಲೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ. ಉರಿಯುವ ಕಣ್ಣಿನ ಬೇನೆಯನ್ನು ತಂಪಾಗಿಸಲೂ ಇದನ್ನು ಬಳಸುವರು.

—ಪ.ನಾ.ಹಳ್ಳಿ. ಹರೀಶ್ ಕುಮಾರ್

## ಏರೋಪ್ಲೇನ್ ಚಿಟ್ಟೆಯ ವರ್ಣ ವೈಭವ

ಕೀಟಗಳೆಂದರೆ ಕಾಟ ಎಂಬ ಮಾತೊಂದಿದೆ. ಆದರೆ ಜೀವ ಜಗತ್ತಿನಲ್ಲಿ ಸುಮಾರು 13 ಲಕ್ಷದಷ್ಟು ಕೀಟಗಳ ಪ್ರಭೇದಗಳಿವೆ. ಅವುಗಳ ವೈವಿಧ್ಯ ಜೀವನ ಕ್ರಮ ಬೆರಗು ಹುಟ್ಟಿಸುತ್ತದೆ. ಅವು ತಮ್ಮ ರಕ್ಷಣೆ, ಆಹಾರ ಸಂಪಾದನೆ ಮತ್ತು ಸಂಗಾತಿಗಳನ್ನು ಆಕರ್ಷಿಸಲು ತಳೆಯುವ ಅವತಾರಗಳು ವಿಭಿನ್ನವಾಗಿದೆ.

ಇಲ್ಲೊಂದು ಏರೋಪ್ಲೇನ್ ಚಿಟ್ಟೆಯಿದೆ. ಹೆಸರಿಗೆ ತಕ್ಕಂತೆ ವಿಮಾನದ ಕ್ಯಾಬಿನ್ ರೂಪದಲ್ಲಿರುವ ಕೊಳವೆಯಾಕಾರದ ದೇಹ, ವಿಶಾಲವಾದ ರೆಕ್ಕೆಗಳು ಸುವರ್ಣ ಲೇಪಿತವಾಗಿ ಜಾಲರಿಯಂತಹ ವಿನ್ಯಾಸವನ್ನು ಇದು ಹೊಂದಿದೆ. ಕಣ್ಣುಗಳು ವಿಮಾನದ ಹೆಡ್‌ಲೈಟ್‌ಗಳಂತೆ ಕಂಗೊಳಿಸುತ್ತವೆ. ಇದನ್ನು ನೋಡಿದರೆ ಒಂದು ಕ್ಷಣ ಏರ್ ಶೋ ಸ್ಪರ್ಧೆಗೆ ಹೊರಟು ನಿಂತಂತೆ ಅನಿಸಬಹುದು.

ಅನಿಸೊಪ್ಟೇರಾ ಎಂಬ ವೈಜ್ಞಾನಿಕ ಹೆಸರಿನ ಈ ಕೀಟಗಳಲ್ಲಿಯೇ 5680 ಉಪ ಪ್ರಭೇದಗಳಿವೆ. ಚಿಟ್ಟೆ ವಂಶದ ಸಂಬಂಧಿಯಾದರೂ ಚಿಟ್ಟೆಯಲ್ಲ. ಇವು ಜೀವಿತಾವಧಿಯ ಮುನ್ನವೇ ಪಕ್ಷಿ, ಹಲ್ಲಿ, ಜೇಡ ಮುಂತಾದ ಜೀವಿಗಳಿಗೆ ಆಹಾರವಾಗುವುದೇ ಹೆಚ್ಚಂತೆ. ಅಳಿವಿನಂಚಿಗೆ ಸಾಗುತ್ತಿರುವ ಕೀಟಗಳೆಂದು ಇವನ್ನು ಗುರುತಿಸಲಾಗಿವೆ. 'ಏರೋಪ್ಲೇನ್ ಚಿಟ್ಟೆ ಮತ್ತು ಇತರೆ ಕತೆಗಳು' ಎಂಬ ಕೃತಿಯಲ್ಲಿ ಪೂರ್ಣಚಂದ್ರ ತೇಜಸ್ವಿ ಇವುಗಳ ಕುರಿತು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

—ಕೆ. ರಾಮಕೃಷ್ಣ ಸೀಬಿನಕೆರೆ, ತೀರ್ಥಹಳ್ಳಿ





## ಗುಬ್ಬಚ್ಚಿಗಳ ಚೆಂದಂದ ಗೂಡು

ಆಗ ಮನೆ ಸೂರಿನ ಹಂಚಿನ ಸಂದಿಗಳಲ್ಲಿ ಗೂಡು ಕಟ್ಟಿ ಚಿಲಿಪಿಲಿಗುಟ್ಟುತ್ತಿದ್ದವು. ನಗರಗಳಲ್ಲಿ ಈಗ ಗುಬ್ಬಿಗಳೇ ಕಾಣಿಸುತ್ತಿಲ್ಲ. ಬರೀ ಚಿತ್ರಗಳಲ್ಲಷ್ಟೇ ಗುಬ್ಬಿಗಳನ್ನು ನೋಡುವಂತಾಗಿದೆ. ಈ ಪಕ್ಷಿಗಳ ದಯನೀಯ ಸ್ಥಿತಿ ಕಂಡ ಗೆಳೆಯ ಪಕ್ಷಿಪ್ರೇಮಿ ರಾಯಚೂರಿನ ಸಲಾಲುದ್ದೀನ್ ಅವರು ಮಣ್ಣಿನ ಮಡಿಕೆಗಳಲ್ಲಿ ಗುಬ್ಬಿ ಗೂಡನ್ನು ಮಾಡಿ ಅದಕ್ಕೆ ಬಣ್ಣ ಬಳಿದು ಕಳುಹಿಸಿಕೊಟ್ಟರು.

ದಾವಣಗೆರೆಯ ನಮ್ಮ ಮನೆಯಲ್ಲಿ ಗೂಡು ಮಾಡಿದ್ದ ಗುಬ್ಬಿಗಳಿಗೆ ಚೆಂದಂದ ಗೂಡು ಸಿಕ್ಕಿತು. ಬಣ್ಣದ ಮಡಿಕೆಯಲ್ಲಿ ಸ್ವಲ್ಪ ನಾರು ಇಟ್ಟು ತೂಗು ಹಾಕಿದ ಮರುದಿನವೇ ಮೂರು ಜೊತೆ ಗುಬ್ಬಿಗಳು ಬಂದವು. ಅವುಗಳಲ್ಲಿ ಬಲಿಷ್ಟವಾಗಿದ್ದ ಜೊಡಿ ಹೊಸ ಗೂಡನ್ನು ಅಕ್ರಮಿಸಿದವು. ನಾವಿಟ್ಟ ನಾರನ್ನು ತೆಗೆದು ಹಾಕಿ ಅವೇ ತಂದ ನಾರು, ಹುಲ್ಲು ಮತ್ತು ರೆಕ್ಕೆ– ಪುಕ್ಕಗಳಿಂದ ಒಳಾಂಗಣ ಸಿದ್ಧಪಡಿಸಿ ಮೊಟ್ಟೆಯಿಟ್ಟು ಮರಿ ಮಾಡಿ ಮೆದುವಾದ ಕಂಬಳಿಹುಳುಗಳು, ಜೇಡ ಮತ್ತು ಸಣ್ಣ ಸಣ್ಣ ಕೀಟಗಳನ್ನು ತರುತ್ತಾ ನಂತರ ಕಾಳು, ಅನ್ನ ಮುಂತಾದವುಗಳನ್ನು ಕೊಟ್ಟು ಮೂರು ಮರಿಗಳನ್ನು ಪೋಷಿಸಿವೆ.

ಬೆಳಿಗ್ಗೆಯಿಂದ ಸಂಜೆಯವರೆಗೆ ತಂದೆ–ತಾಯಿಗಳಿಬ್ಬರೂ ಅವಿರತವಾಗಿ ಆಹಾರ ತರುವುದು. ಆಹಾರ ಬಂದ ಕೂಡಲೇ ಮರಿಗಳು ಗೂಡಿನಿಂದ ಇಣುಕಿ ಕಸಿದುಕೊಳ್ಳುವುದು, ಚಿಲಿಪಿಲಿಗುಟ್ಟುವುದು ಮತ್ತು ಅದನ್ನು ನಾವು ಮರೆಯಲ್ಲಿ ನಿಂತು ನೋಡುವುದು ದಿನನಿತ್ಯ ನಡೆದಿದೆ. ವರ್ಷದಲ್ಲಿ ಮೂರರಿಂದ ನಾಲ್ಕು ಬಾರಿ ಸಂತಾನಭಿವೃದ್ಧಿ ಮಾಡುತ್ತವೆ.

—ಡಾ. ಎಸ್. ಶಿಶುಪಾಲ, ದಾವಣಗೆರೆ